ಶ್ರೀ ಎ.ಆರ್.ಕೃಷ್ಣಮೂರ್ತಿ:- ನಾನು ಹೇಳತಕ್ಕಂಥಾದ್ದು ಇಲ್ಲಿ ಏನು ಮಾಹಿತಿ ಕೊಟ್ಟಿದ್ದಾರೆ ಅದು ಸರಿಯಾಗಿಲ್ಲ. ಇವತ್ತು ಒಂದು ತರಹ ಉತ್ತರ. ಅನ್-ಸ್ಟಾರ್ಡ್‌ಗೆ ಒಂದು ತರಹ ಉತ್ತರ, ಶ್ರೀ ಸೋಮಶೇಖರ್‌ರವರಿಗೆ ಒಂದು ತರಹ ಉತ್ತರ, ಮೂರು ಮೂರು ತರಹ ಉತ್ತರ ಇದೆ. ಇದರಲ್ಲಿ ಯಾವುದು ಸರಿ ಎನ್ನುವುದು ನನ್ನ ಪ್ರಶ್ನೆ.

(ಗೊಂದಲ)

ಶ್ರೀ ಎಂ.ಚಂದ್ರಪ್ಪ:- ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ? ಈ ರೀತಿ ತಪ್ಪು ಮಾಹಿತಿ ಕೊಟ್ಟವರ ಮೇಲೆ, ಅದು ನಮ್ಮ ಪ್ರಶ್ನೆ.

ಅಧ್ಯಕ್ಷರು:- ಸರಿಪಡಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀನಿವಾಸ ಶೆಟ್ಟಿಯವರೆ, ತಾವು ಪ್ರಶ್ನೆ ಕೇಳಿ..

(ಈ ಹಂತದಲ್ಲಿ ಶ್ರೀ ಎ.ಆರ್. ಕೃಷ್ಣ ಮೂರ್ತಿಯವರೊಡನೆ ಜನತಾದಳ (ಯು)ನ ಎಲ್ಲಾ ಸದಸ್ಯರು ಧರಣಿ ಮಾಡಿದರು)

ಶ್ರೀ ಎಂ.ಚಂದ್ರಪ್ಪ:-ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗಬೇಕಲ್ಲ.

ಅಧ್ಯಕ್ಷರು:- ಮಾನ್ಯ ಚಂದ್ರಪ್ಪ, ಸುಮ್ನೆ ಇರಿ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸಮಸ್ಯೆ ಬರುವಂಥಾದ್ದು ಏನೆಂದರೆ ಒಂದೇ ಪ್ರಶ್ನೆಗೆ ಮೂರು ತರಹ ಉತ್ತರ ಕೊಟ್ಟಿದ್ದಾರೆ. ಆ ರೀತಿ ತಪ್ಪು ಮಾಹಿತಿ ಕೊಡುವಂತಹ ಯಾರು ಅಧಿಕಾರಿಗಳಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥಾದ್ದು ಆಗಬೇಕು.

ಅಧ್ಯಕ್ಷರು:- ತಪ್ಪು ಮಾಡಿದಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ.

ಶ್ರೀ ಆರ್.ರೋಷನ್ ಬೇಗ್:- ಆಯಿತು.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ನಮಗೆ ಉತ್ತರಗಳು ಬರುವುದಿಲ್ಲ, ಹಾಗೆ ಬಂದರೂ ತಪ್ಪು ಉತ್ತರಗಳು ಬರುತ್ತವೆ. ಹಾಗಾದರೆ ಇಲ್ಲಿ ಸರ್ಕಾರ ಕೆಲಸ ಮಾಡುತ್ತಿದೆಯೇ? ಇದಕ್ಕಾಗಿ ಸದನ ಏಕೆ ನಡೆಯಬೇಕು? ವಿಧಾನ ಸಭೆಯಲ್ಲಿ ನಾವು ಪ್ರಶ್ನೆ ಏಕೆ ಕೇಳಬೇಕು? ಇದರ ಅರ್ಥ ಎನು?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ಅಧಿಕಾರಿಗಳು ಅವರಿಗೆ ಹೇಗೆ ಬೇಕೋ ಹಾಗೆ ಆ ರೀತಿ ಉತ್ತರ ಕೊಡಬಹುದೇ?

ಶ್ರೀ ಜಗದೀಶ ಶೆಟ್ಟರ್: - ಮಾನ್ಯ ಅಧ್ಯಕ್ಷರೇ, ಅವರು ಒಂದು ಪ್ರಶ್ನೆ ಕೇಳಿದ್ದಾರೆ. ಲಿಖಿತವಾಗಿ ಕೊಟ್ಟಿರುವ ಉತ್ತರದಲ್ಲಿ ಇರುವಂತಹ ಫ್ಯಾಕ್ಟ್ ಬೇರೆ. ಇಲ್ಲಿ ಸದನದಲ್ಲಿ ಮಾನ್ಯ ಮಂತ್ರಿಗಳು ಹೇಳುವಂತಹ ಉತ್ತರವೇ ಬೇರೆ. ಮತ್ತೊಂದು ಕಡೆ ಬರುವಂತಹ ಉತ್ತರ ಬೇರೆ. ಈ ರೀತಿಯಾಗಿ ಮೂರು ಕಡೆ ಮೂರು ರೀತಿಯಾದ ಉತ್ತರಗಳು ಬಂದಂತಹ ಸಂದರ್ಭದಲ್ಲಿ ಯಾವುದು ಸರಿ? ಹಾಗಾದರೆ ಲಿಖಿತವಾಗಿ ಕೊಟ್ಟಿರುವ ಉತ್ತರದಲ್ಲಿ ನೀವು ಫ್ಯಾಕ್ಟ್ ಬೇರೆ ಬರೆದು ಕೊಟ್ಟಿದ್ದರೆ ಅದಕ್ಕೆ ಯಾರು ಹೊಣೆ? ಜವಾಬ್ದಾರರು ಯಾರು? ಅದಕ್ಕೆ ಸಂಬಂಧಪಟ್ಟ